<u>ಸಾಕ್ಷಿಯನ್ನು ದಿನಾಂಕಃ **01-08-2025** ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.</u>

<u>ಮುಂದುವರೆದ ಪಾಟೀಸವಾಲುಃ **1** ಮತ್ತು **2** ನೇ ಪ್ರತಿವಾದಿ ಪರ ಶ್ರೀ. ಎಂ.ಎಸ್.ಬಿ. ವಕೀಲರವರಿಂದಃ</u>

2. 1 ನೇ ದಾವಾ ಅಸ್ತಿಯನ್ನು 1 ನೇ ಪ್ರತಿವಾದಿ 2 ನೇ ಪ್ರತಿವಾದಿಗೆ ಮಾರಾಟ ಮಾಡಿದ ನೊಂದಾಯಿತ ಖರೀದಿ ಪತ್ರಕ್ಕೆ ನನ್ನ ತಂದೆ ಕೂಡ ಸಹಿ ಹಾಕಿರುವರು ಅಂದರೆ ಸರಿ. ನಂತರ 2 ನೇ ಪ್ರತಿವಾದಿ 1 ನೇ ದಾವಾ ಅಸ್ತಿಯನ್ನು ತನ್ನ ಅಕ್ಕನ ಮದುವೆಯ ಖರ್ಚನ್ನು ಬರಿಸುವ ಸಲುವಾಗಿ ಮಾರಾಟ ಮಾಡಿರುನು ಅಂದರೆ ಸರಿಯಲ್ಲ. ನಂತರ 2 ನೇ ಪ್ರತಿವಾದಿಯಿಂದ ಖರೀದಿ ಮಾಡಿದ ಹೆಚ್. ಎಂ. ಮಂಜಯ್ಯರವರು ತನ್ನ ಖಾಸಗಿ ಕಾರಣಕ್ಕೆ ಅದನ್ನು ಪುನಃ 4 ನೇ ಪ್ರತಿವಾದಿಗೆ ಮಾರಾಟ ಮಾಡಿರುವರು ಅಂದರೆ ಸರಿಯಲ್ಲ. ಆ ಕಾರಣಕ್ಕಾಗಿ ನನನಾಗಲೀ ಉಳಿದ ಪ್ರತಿವಾದಿಗಳಿಗಾಗಲೀ 1 ನೇ ದಾವಾ ಅಸ್ತಿಯ ಮೇಲೆ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ ಅಂದರೆ ಸರಿಯಲ್ಲ. 1 ನೇ ದಾವಾ ಅಸ್ತಿಯು ರಮೇಶನ ಅಂದರೆ 4 ನೇ ಪರತಿವಾದಿಯ ಸಾವಧೀನ ಅನುಭವದಲ್ಲಿರುವುದು ಅಂದರೆ ಸರಿಯಲ್ಲ.

3. ಈ ದಾವೆಯಲ್ಲಿ ನಾವು ವಾಸ ಇರುವ ಮನೆಯನ್ನು ಸೇರಿಸಿರುವುದಿಲ್ಲ ಅಂದರೆ ಸರಿಯಲ್ಲ. ನಾವು 2 ನೇ ಪ್ರತಿವಾದಿಯನ್ನು ಮನೆಯಿಂದ ಹೊರ ಹಾಕಿದ್ದೇವೆ

**ಸಾಕ್ಷಿಯ ಸಹಿ**

ಅಂದರೆ ಸರಿಯಲ್ಲ. ಆತನು ಬೇರೆ ಮನೆಯಲ್ಲಿ ಬಾಡಿಗೆಗೆ ಇರುವನು ಅಂದರೆ ಸರಿಯಲ್ಲ. ನಾನು ದಾವಾ ಅಸ್ತಿಯಲ್ಲಿ ಪಾಲು ಪಡೆಯಲು ಅರ್ಹನಾಗಿರುವುದಿಲ್ಲ ಅಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿಯಿದೆ.

01-08-2025

ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಹರಪನಹಳ್ಳಿ

ಸಾಕ್ಷಿಯ ಸಹಿ